

# ಒಣಮರದಲ್ಲಿ ಜೀವಸಂಚಾರ

ಚಿತ್ರ ಬರಹ:
**ಕೇಶವ ಕುಡ್ಲ**

ಸೃಜನಶೀಲ ಛಾಯಾಗ್ರಾಹಕನೊಬ್ಬ ಫೋಟೋಶಾಪ್ ಮೊದಲಾದ ತಂತ್ರಾಂಶಗಳನ್ನು ಉಪಯೋಗಿಸಿ ನಮ್ಮ ಕಣ್ಣುಗಳು ಬೆರಗಾಗು-ವಂತಹ ಅದ್ಭುತ ಚಿತ್ರಗಳನ್ನು ರೂಪಿಸಬಲ್ಲ. ಹಲವು ಚಿತ್ರಗಳಿಂದ ಆಯ್ದ ಭಾಗಗಳನ್ನು ಸಂಯೋಜಿಸಿ ಹೊಸ ಅರ್ಥ ಹೊಳೆಯಿಸಬಲ್ಲ. ಉತ್ಸಾಹ, ಗ್ರಾಫಿಕ್ ಜ್ಞಾನ ಮತ್ತು ಸೃಜನಶೀಲತೆ ಎಲ್ಲವೂ ಮೇಳೈಸಿದಾಗ ಮಾತ್ರ ಅವಾಸ್ತವವನ್ನು ವಾಸ್ತವ ಎಂದು ತೋರಿಸಲು ಸಾಧ್ಯ.

ಬೆಟ್ಟಗುಡ್ಡಗಳಲ್ಲಿ ಚಾರಣಕ್ಕಾಗಿ ಸುತ್ತುವಾಗ ಆಯುಸ್ಸು ಮುಗಿದೋ ಅಥವ ಮರಗಳ್ಳರ ದಾಳಿಗೆ ತುತ್ತಾಗಿಯೋ ಹಲವಾರು ಮರಗಳು ಉರುಳಿ ಒಣಗಿ ಗೆದ್ದಲು ಹಿಡಿದು ಮಣ್ಣಾಗುವ ಹಂತದಲ್ಲಿ ಇರುವುದು ಕಾಣಿಸುತ್ತದೆ. ಹಾಗೆ ಒಣಗಿದ ಮರದ ತುಂಡುಗಳನ್ನು ಕುತೂಹಲದಿಂದ ಗಮನಿಸುವಾಗ ಅಲ್ಲಲ್ಲಿ ಅಸ್ಪಷ್ಟವಾಗಿ ಹಲವಾರು ಪ್ರಾಣಿಗಳ ಆಕಾರ ಕಂಡಂತಾಗುತ್ತದೆ! ಹಾಗೆ ಕಾಣಿಸಿದಾಗೆಲ್ಲ ಇವಕ್ಕೆಲ್ಲ ಸೂಕ್ತ ಕಣ್ಣುಗಳನ್ನು ಹಾಕಿದರೆ ಜೀವ ಸಂಚಾರವಾಗಬಹುದೆ? ಎಂಬ ಕುತೂಹಲ ಕಾಡುತ್ತಿತ್ತು. ಒಮ್ಮೆ ಗುಂಡ್ಯದಿಂದ ಎಡಕುಮೇರಿವರೆಗಿನ ಚಾರಣದ ಕಾಲದಲ್ಲಿ ಕಾಡುಗಳ್ಳರು ಕಡಿದು ಎಸೆದಿದ್ದ ಒಂದು ಮರದ ತುಂಡು ದೂರದಿಂದ ಹಕ್ಕಿಯಂತೆ ಕಾಣಿಸಿತು. ಅದನ್ನು ಫೋಟೋ ತೆಗೆದುಕೊಂಡು ಬಂದು ಕಂಪ್ಯೂಟರಿನಲ್ಲಿ ಪ್ರಾಣಿಯೊಂದರ ಕಣ್ಣು ಜೋಡಿಸಿದಾಗ ಅದೊಂದು ಜೀವಿಯಂತೆಯೇ ಕಾಣಿಸಿತು.



ಆದರೆ ಪುಷ್ಪಗಿರಿ ಚಾರಣದ ಕಾಲದಲ್ಲಿ ಹಾದಿಯಲ್ಲಿ ಸಿಕ್ಕ ಶೇಷ ಪರ್ವತದ ತುದಿಯಲ್ಲಿ ಒಂದಿಡೀ ಮರ ಮುರಿದು ಬಿದ್ದಿದ್ದನ್ನು ಕಂಡಾಗ ಅದರ ಒಂದು ಕೊಂಬೆಯು ಥೇಟ್ ಚಿರತೆಯಂತೆ ಕಾಣಿಸುತ್ತಿತ್ತು. ಮತ್ತೊಮ್ಮೆ ಕೊಡಚಾದ್ರಿ-ಯಲ್ಲಿ ಅಲೆಯುತ್ತಿದ್ದಾಗ ಪೊದೆಯೊಳಗಿನಿಂದ ಹೆಬ್ಬಾವು ತಲೆಹಾಕಿದಂತೆ ಹೆದರಿಸುತ್ತಿದ್ದ ಮರದ ದಿಮ್ಮಿ ಕಾಣಿಸಿತ್ತು. ಕಳೆದ ಏಳೆಂಟು ವರ್ಷಗಳಲ್ಲಿ ಹೀಗೆ ಅಲ್ಲಲ್ಲಿ ಕಾಣಿಸಿದ ವಿಶಿಷ್ಟ ಮರದ ತುಂಡುಗಳು ಹೊಸ ರೂಪದಲ್ಲಿ ಇಲ್ಲಿವೆ.

ನಮ್ಮ ಪ್ರಯತ್ನದಲ್ಲಿ ಸ್ವಲ್ಪವಾದರೂ ಯಶಸ್ಸು ಸಿಕ್ಕಬೇಕೆಂದರೆ ನಾವು ಆಯ್ಕೆ ಮಾಡಿಕೊಂಡ ಮರದ ತುಂಡಿನಲ್ಲಿ ಟೊಂಗೆ ಕಳಚಿಕೊಂಡ ಕುಳಿ ಇರುವುದು ಅತ್ಯಗತ್ಯ. ಇಲ್ಲವಾದಲ್ಲಿ ಕಣ್ಣು ಕೂರಿಸಿದಾಗ ಹೊಂದಾಣಿಕೆ ಆಗುವುದು ಸಾಧ್ಯವೇ ಇಲ್ಲ. ಕುಳಿಯೊಳಗೆ ಕಣ್ಣು ಸೇರಿಸಿದ ನಂತರ ಅದಕ್ಕೆ ಸೂಕ್ತವಾದ ಉಬ್ಬಿದ ಹುಬ್ಬು, ಅದಕ್ಕಿರಬಹುದಾದ ರೆಪ್ಪೆ ಮತ್ತು ರೆಪ್ಪೆಯ ಕೂದಲು ಇತ್ಯಾದಿ ಸೃಷ್ಟಿಸಬೇಕಾಗುತ್ತದೆ. ಇಲ್ಲವಾದಲ್ಲಿ ಅಪೇಕ್ಷಿತ ಪರಿಣಾಮವನ್ನು ಸೃಷ್ಟಿಸುವಲ್ಲಿ ಸೋಲು ಎದುರಾಗುತ್ತದೆ.